

ದೀಪ್ತಿ ಬ್ಲೆಸ್ಸಿ

ಅಥವಾ ಕಾಲರ್ ಮೈಕ್ ಹಾಕಿಕೊಂಡಿರುತ್ತಾರೆ. ಸಮಕಾಲೀನ ಪ್ರಸಂಗಗಳನ್ನು ಇಟ್ಟುಕೊಂಡು ಅವರು ಮಾತಿನ ಮಲ್ಲರಾಗುತ್ತಾರೆ. ನುಡಿಗಟ್ಟುಗಳ ಲೀಲಾಜಾಲ ಬಳಕೆ, ಮಾತಿನ ಹದವರಿತ ಏರಿಳಿತ ಇವೆಲ್ಲವೂ ಪ್ರದರ್ಶನದ 'ಟೂಲ್'ಗಳು. ಸೊಗಸಾದ ಹಾಸ್ಯಪ್ರಜ್ಞೆಯೇ ಅದರ ಆತ್ಮ. ಇವೆಲ್ಲದರಲ್ಲೂ ಯಾರು ಹಿಡಿತ ಸಾಧಿಸಿರುತ್ತಾರೋ ಅವರು ಯಶಸ್ವಿ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಆಗಬಲ್ಲರು.

ದಶಕದ ಹಿಂದೆ ಬೆಂಗಳೂರಿನ ತಾರಾ ಹೋಟೆಲ್‌ನಲ್ಲಿ ಹಿಂದಿ ನಟ ಬೊಮನ್ ಇರಾನಿ ಹಾಗೂ ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್ ರಸಸಂಜೆಯೊಂದನ್ನು ನಡೆಸಿಕೊಟ್ಟರು. ಪಾರ್ಸಿಗಳ ಬದುಕಿನಲ್ಲಿ ಹೊಮ್ಮುವ ಸಹಜ ಹಾಸ್ಯ ರಸಾಯನವನ್ನು ಬೊಮನ್ ಬಡಿಸಿದರು. ಶ್ರೀಕಾಂತ್ 1983ರ ವಿಶ್ವಕಪ್‌ನಲ್ಲಿ ತಮ್ಮನ್ನು ಸಹ ಆಟಗಾರರು ಒಂದೇ ಕಡೆ ನಿಲ್ಲುವಂತೆ ಮಾಡಿದ ಪ್ರಸಂಗವನ್ನು ಹಂಚಿಕೊಂಡರು. ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಕಪಿಲ್ ದೇವ್ ಆಕ್ರಮಣಕಾರಿಯಾಗಿ ಆಡುತ್ತಿದ್ದಾಗ, ಶ್ರೀಕಾಂತ್ ಅವರನ್ನು ವಾಸ್ತುಪ್ರಕಾರ ಎಲ್ಲರೂ ಒಂದೇ ಸ್ಥಳದಲ್ಲಿ ನಿಲ್ಲುವಂತೆ ಮಾಡಿದ್ದರು. ಸೈಯದ್ ಕಿರ್ಮಾನಿ ಆದಿಯಾಗಿ ಅನೇಕರು ಅವರನ್ನು ಅಲ್ಲಿಂದ ಕದಲಲು ಬಿಡಲಿಲ್ಲ. ಅವರು ಕದಲಿಬಿಟ್ಟರೆ ಕಪಿಲ್ ಔಟಾಗುತ್ತಾರೆ ಎನ್ನುವುದು ನಂಬಿಕೆ. ಕಪಿಲ್ ಶತಕಕ್ಕೆ ಹತ್ತಿರವಾಗುತ್ತಿದ್ದರೆ ಶ್ರೀಕಾಂತ್‌ಗೆ ಮೂತ್ರ ವಿಸರ್ಜನೆಗೆ ಹೋಗಬೇಕೆನಿಸಿತು. ಆದರೆ, ಸ್ನೇಹಿತರು ಅದಕ್ಕೂ ಬಿಡಲಿಲ್ಲ. ಕಪಿಲ್ 175 ರನ್ ಹೊಡೆದು ಪೆವಿಲಿಯನ್‌ಗೆ ಮರಳಿದ್ದೇ ಶ್ರೀಕಾಂತ್ ನಿರಾಳರಾದರಂತೆ. ಯಾಕೆಂದರೆ, ಆಗಷ್ಟೇ ಅವರಿಗೆ ಕಟ್ಟಿಕೊಂಡಿದ್ದ ಮೂತ್ರವನ್ನು ವಿಸರ್ಜಿಸುವ ಅವಕಾಶ ಸಿಕ್ಕಿದ್ದು.

ಯೂಟ್ಯೂಬ್ ವೇದಿಕೆ ಜನಪ್ರಿಯ ಮನರಂಜನೆಯ ಮುಖ್ಯವಾಹಿನಿಗಳಿಗೆ ಪರ್ಯಾಯವಾದ ಮನರಂಜನೆಯನ್ನು ಒದಗಿಸಲು ತೊಡಗಿದಾಗ 'ಸ್ಟ್ಯಾಂಡ್–ಅಪ್ ಕಾಮಿಡಿ' ಪ್ರಕಾರಕ್ಕೆ ಇನ್ನೊಂದು ಭೂಮಿಕೆ ಸಿಕ್ಕಂತಾಯಿತು. ಝಾಕಿರ್ ಖಾನ್, ಕೆನ್ನಿ ಸೆಬಾಸ್ಟಿಯನ್, ಕನನ್ ಗಿಲ್, ಅಭಿಷ್ ಮ್ಯಾಥ್ಯು, ಬಿಸ್ವ ಕಲ್ಯಾಣ್ ರಥ್, ಅದಿತಿ ಮಿತ್ತಲ್, ಸೌರಭ್ ಪಂತ್, ವೀರ್ ದಾಸ್, ಅತುಲ್ ಖತ್ರಿ, ಅನುಭವ್ ಪಾಲ್ ಇವರೆಲ್ಲ ಹಿಂದಿ ಯೂ–ಟ್ಯೂಬ್ ವೇದಿಕೆಯಲ್ಲಿ ಸದ್ದು ಮಾಡಿರುವವರು. ಬಿಸ್ವ ಕಲ್ಯಾಣ್ ರಥ್, ಕೆನ್ನಿ, ಕನನ್, ಝಾಕಿರ್ ಖಾನ್, ವೀರ್ ದಾಸ್ ಇವರೆಲ್ಲ ಸ್ಟ್ಯಾಂಡ್–ಅಪ್ ಕಾಮಿಡಿಯನ್‌ಗಳಾಗಿಯೂ ಹೆಸರು ಮಾಡಿದವರು.

ವೀರ್ ದಾಸ್ ಅವರು ಚಿತ್ರರಂಗದಲ್ಲೂ ಪರಿಚಿತ ಹೆಸರು. ಅದಿತಿ ಮಿತ್ತಲ್, ಸುಮುಖಿ ಸುರೇಶ್ ಕಾಮಿಡಿ ಸ್ಕೆಚ್‌ಗಳ ಮೂಲಕ ಮೊದಲು ಅಡಿಯಿಟ್ಟು, ಆಮೇಲೆ ಯೂ–ಟ್ಯೂಬ್ ಚಾನೆಲ್‌ನಲ್ಲೂ ಸದ್ದು ಮಾಡಿದವರು. ಬೆಂಗಳೂರಿನಲ್ಲೇ ಕೆಲಸ ಮಾಡುವ ಸುಮುಖಿ 'ಹಂಬಲ್ ಪೊಲಿಟಿಷಿಯನ್ ನೊಗರಾಜ್' ಕನ್ನಡ ಸಿನಿಮಾದಲ್ಲಿಯೂ ಅಭಿನಯಿಸಿದ್ದಾರೆ. 'ಬೆಹ್ತೀ ನಾಕ್...' ಹಿಂದಿ ಚುಟುಕು ಸರಣಿಗಳ ಮೂಲಕ ಅವರು

'ನಗೆ ಕ್ಲಬ್'ಗಳು ಸಂಸಾರ, ಹೆಂಡತಿ–ಗಂಡ, ಅತ್ತೆ–ಸೊಸೆಯರ, ಹಳ್ಳಿಗಾಡುಗಳ ಚರ್ವಿತ ಚರ್ವಣ ಹಾಸ್ಯವನ್ನು ಉಣಬಡಿಸುತ್ತಿರುವ ಹೊತ್ತಿನಲ್ಲಿ ಕುಮಾನ್ ಕಾಮ್ರ ತರಹದ ಹಾಸ್ಯಗಾರರು ಎದೆಗಾರಿಕೆಯಿಂದ ನಿಂತು ಸರ್ಕಾರದ ಕಾಲೆಳೆಯುವ ಚಟಾಕಿಗಳನ್ನು ಹಾರಿಸುತ್ತಿರುವುದು ಈ ಕಾಲಘಟ್ಟದಲ್ಲಿ ಸಾಹಸವೇ ಸರಿ.

